**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.296/2018**

(ಪ್ರಾ.ಸಾ.13 / ಚಾ.ಸಾ.21)

ತಾಃ 22-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು : ಕೊಂಡಪ್ಪ

ತಂದೆಯ ಹೆಸರು : ಕೆ.ಕೊಂಡಪ್ಪ
ವಯಸ್ಸು : 62 ವರ್ಷ
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ದೇವಶೆಟ್ಟಹಳ್ಳಿ

**ಮುಖ್ಯ ವಿಚಾರಣೆ ಃ ಪ್ರಭಾರ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಅಮಾನತ್ತು ಪಂಚನಾಮೆಯಾಗಿದ್ದು ಸದರಿ ಅಮಾನತ್ತು ಪಂಚನಾಮೆಯನ್ನು ನಿಪಿ-18 ಎಂದು ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.

2. ಸುಮಾರು ಮೂರು ವರ್ಷಗಳ ಹಿಂದೆ ಪೋಲಿಸರ ಕೋರಿಕೆಯ ಮೇರೆಗೆ ನಂದಗುಡಿ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪೋಲಿಸರು ಸಹಿ ಹಾಕಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಾನು ಸಹಿ ಮಾಡಿದ ಸಮಯದಲ್ಲಿ ಮತ್ತೆ ಯಾರು ಇದ್ದರು ಎಂದು ಗೊತ್ತಿಲ್ಲ.

3. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇದ್ದ ಒಂದು ಬಿಳಿ ಚೀಲವನ್ನು ಪ್ಯಾಕ್ ಮಾಡಿ ಸೀಲ್ ಮಾಡಿದ್ದು ಅದರ ಮೇಲೆ ಬಿಳಿ ಚೀಟಿ ಅಂಟಿಸಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆದ ಕಾರಣ ಸದರಿ ಪ್ಯಾಕ್ ಮತ್ತು ಸೀಲ್ ಮಾಡಿದ್ದ ವಸ್ತುವನ್ನು ಗುರುತಿಸುವ ಸಲುವಾಗಿ ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಅದರಂತೆ ಅನುಮತಿಯನ್ನು ನೀಡಲಾಯಿತು. ತೆರೆದ ನ್ಯಾಯಾಲಯದಲ್ಲಿ ಬಿಳಿ ಚೀಲದಿಂದ ಪ್ಯಾಕ್ ಮಾಡಿ ಸೀಲ್ ಮಾಡಿದ್ದ ವಸ್ತುವನ್ನು ಆರೋಪಿಗಳು ಹಾಗೂ ಆರೋಪಿ ಪರ ವಕೀಲರ ಸಮಕ್ಷಮದಲ್ಲಿ ತೆರೆದ ನ್ಯಾಯಾಲಯದಲ್ಲಿ ತೆಗೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ವಸ್ತುವನ್ನು ನೋಡಿ ಗುರುತಿಸಿರುವುದಿಲ್ಲ. ಸಾಕ್ಷಿ ಪೋಲಿಸರು ಬಿಳಿ ಚೀಟಿಯ ಮೇಲೆ ನನ್ನ ಸಹಿಯನ್ನು ತೆಗೆದುಕೊಂಡಿರುವುದಾಗಿ ನುಡಿಯುತ್ತಾರೆ. ನನ್ನ ಸಮಕ್ಷಮ ಸದರಿ ವಸ್ತುವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದು ಹೇಳಿದ ಕಾರಣ ಅದನ್ನು ನಿಶಾನೆಕರಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ-**

ದಿನಾಂಕ 21-11-2017 ರಂದು ಕೋರ ರಸ್ತೆಯಲ್ಲಿರುವ ಹೆಚ್ ಕ್ರಾಸ್ ಬಳಿ ಇರುವ ಕವಿತಾ ಡಾಬಾದ ಹತ್ತಿರ ನನ್ನನ್ನು ಈ ಪ್ರಕರಣದಲ್ಲಿ ಪಂಚರಾಗಿ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ.

2. ದಿನಾಂಕ 17-11-2017 ರಂದು ಸಂಜೆ ಸದರಿ ದಾಬಾದಲ್ಲಿ ಗಲಾಟೆಯಾಗಿದ್ದು ಗಲಾಟೆ ದೃಶ್ಯಗಳು ಸಿ.ಸಿ. ಟಿ.ವಿ.ಯಲ್ಲಿ ಸೆರೆಯಾಗಿದ್ದ ಸದರಿ ದೃಶ್ಯಗಳನ್ನು ಹಾರ್ಡ್ ಡಿಸ್ಕ್‌ನಲ್ಲಿ ಶೇಕರಿಸಿ ಅದನ್ನು ಅಮಾನತ್ತುಪಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ

ಸಿ.ಸಿ.ಟಿ.ವಿ. ಅಳವಡಿಸಿದ್ದ ಲೋಕೇಶ್/ಚಸಾ-22 ರವರು ಹಾಜರಿದ್ದು ಸದರಿ ದೃಶ್ಯಾವಳಿಗಳನ್ನು ಹಾರ್ಡ್ ಡಿಸ್ಕ್‌ನಲ್ಲಿ ಹಾಕಿ ಹಾಗೂ ಸದರಿ ದೃಶ್ಯಾವಳಿಗಳನ್ನು ನಮ್ಮ ಸಮಕ್ಷಮ ಸದರಿ ಹಾರ್ಡ್ ಡಿಸ್ಕ್‌ನ್ನು ಮತ್ತು ಸಿ.ಪಿ.ಪ್ಲಸ್ ಕಂಪನಿಯ ಕಪ್ಪು ಬಣ್ಣದ ಕಾಸ್‌ಮಿಕ್ ಹಾರ್ಡ್‌ಡಿಸ್ಕ್ ಮಾಡೇಲ್ ಸಿ.ಪಿ.ಯು.ಯು.ಆರ್. ಆಗಿತ್ತು ಆಗ ಹಾಜರುಪಡಿಸಿದಾಗ ನಿಪಿ-18 ರಂತೆ ಪೋಲಿಸರು ಮೇಲೆ ಹೇಳಿದ ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡು ನನ್ನ ಹಾಗೂ ಚಾಸಾ-22 ರವರ ಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡು ಅದರಲ್ಲಿ ಬರೆದ ಅಂಶಗಳನ್ನು ಓದಿ ಹೇಳಿದ ನಂತರ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

3. ಆರೋಪಿತರಿಗೆ ಸಹಾಯ ಮಾಡಲು ನನ್ನ ಸಮಕ್ಷಮ ಮೇಲೆ ಹೇಳಿದ ವಸ್ತುವನ್ನು ಮಾನತ್ತುಪಡಿಸಿಕೊಂಡು ನಿಪಿ-18 ರಂತೆ ಅಮಾನತ್ತು ಪಂಚನಾಮೆ ಮಾಡಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರುಗಳಿಂದ ಃ**

ಆರೋಪಿತರುಗಳ ವಕೀಲರುಗಳು ಯಾವುದೇ ಪಾಟೀ-ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರುವಿಚಾರಣೆಃ** ಇಲ್ಲ

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಚೆನ್ನಪ್ಪ ಗೌಡ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.